# ಚಿತ್ರದುರ್ಗ ಪರಿಸರದ ಚಕ್ಕೆ ಭಜನೆ: ವೈಶಿಷ್ಟ್ಯತೆಗಳು

**ರುಜುವಾನ್ ಕೆ.**

ಸಂಶೋಧನಾ ವಿದ್ಯಾರ್ಥಿ

ಡಾ.ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

rujusuchi@gmail.com

ದೈವಾರಾಧನೆ, ಗುರುಭಕ್ತಿ ಹಾಗೂ ಮನರಂಜನೆ ಈ ಮೂರು ಅಂಶಗಳ ಪ್ರಧಾನವುಳ್ಳ ಜನಪದ ಪ್ರದರ್ಶನಾತ್ಮಕ ಕಲೆಗಳಲ್ಲಿ ಚಕ್ಕೆ ಭನೆಯು ಒಂದು. ಇದನ್ನು ಚಿತ್ರದುರ್ಗದ ಪರಿಸರದಲ್ಲಿ 'ಶ್ರೀ ರಾಮ ಚಕ್ಕೆ ಭಜನೆ' ಎನ್ನುವಂತಹ ಹೆಸರಿನಿಂದಲೂ ಕರೆಯುತ್ತಾರೆ. ಹೆಚ್ಚಾಗಿ ಇದು ಆಂಧ್ರಪ್ರದೇಶದ ಹಲವು ಕಡೆಗಳಲ್ಲಿ ಪ್ರದರ್ಶನದಲ್ಲಿದೆ. ಆದರೆ ಆಂಧ್ರ ಮತ್ತು ಕರ್ನಾಟಕದ ಗಡಿಯಂಚಿನಲ್ಲಿರುವ ಕೆಲವೇ ಕೆಲವು ಕನ್ನಡದ ನೆಲೆಗಳಲ್ಲಿ ಮಾತ್ರ ಇದರ ಪ್ರದರ್ಶನವನ್ನು ಕಾಣಬಹುದು. ಅದರಲ್ಲೂ ಚಿತ್ರದುರ್ಗದ ಚಳ್ಳಕೆರೆಯಲ್ಲಿ ಮಾತ್ರ ಈ ಕಲೆ ಪ್ರಸಾರದಲ್ಲಿರುವುದು ಮತ್ತು ಇಡೀ ಜಿಲ್ಲೆಯಲ್ಲಿಯೇ ಶ್ರೀ ಗುಂಡುರಾವ್ ಎಂಬ ಏಕೈಕ ಚಕ್ಕೆ ಭಜನೆಯನ್ನು ಕಲಿಸುವ ಮೇಸ್ಟ್ರು ಇರುವುದು ಈ ಪ್ರದೇಶದ ಹಿರಿಮೆಯಾಗಿದೆ. ಚಕ್ಕೆ ಭಜನೆ ಎಂಬ ಹೆಸರೇ ಸೂಚಿಸುವಂತೆ ಇಲ್ಲಿ ಕೈಯಲ್ಲಿ ಹಿಡಿಯುವ ಚಕ್ಕೆ ಮತ್ತು ಭಕ್ತಿಭಾವದಿಂದ ಮಾಡುವ ಭಜನೆ ಇವೆರೆಡು ಸಮ್ಮಿಲನಗೊಂಡು ಒಂದು ವಿಶಿಷ್ಟ ಕಲಾ ರೂಪವಾಗಿ ಹೊರಹೊಮ್ಮಿದೆ. "ಸುಮಾರು ಒಂದು ಅಡಿಯಷ್ಟು ಉದ್ದವಿರುವ ಮರದ ಹಲಗೆಗಳನ್ನು ಬಲಗೈಯಲ್ಲಿ ಹಿಡಿದುಕೊಂಡು ತಾಳಕ್ಕೆ ಅನುಗುಣವಾಗಿ, ಲಯ ತಪ್ಪದೆ ಆಡುತ್ತಾ, ಹಾಡುತ್ತಾ ಮಾಡುವ ಭಜನೆಯೇ ಚಕ್ಕೆ ಭಜನೆ."[1] ಎಂದು ಹೇಳಬಹುದು.

ಇದರಲ್ಲಿ ಚಿಕ್ಕ ವಯಸ್ಸಿನ ಮಕ್ಕಳುಗಳಿಂದ ಹಿಡಿದು ಹಿರಿಯರವರೆಗೂ ಎಲ್ಲರೂ ಪಾಲ್ಗೊಳ್ಳಲು ಅವಕಾಶವಿದ್ದು, ಜಾತಿ ಜನಾಂಗಗಳ ಬೇಧವಿರದೆ ಯಾರು ಬೇಕಾದರೂ ಕಲಿತು ಇದನ್ನು ಮಾಡಬಹುದು. ಇಂತಿಷ್ಟೇ ಜನ ಕುಣಿಯುವವರು ಇರಬೇಕೆಂಬ ನಿಯಮವೇನೂ ಇಲ್ಲ. ಕುಣಿಯುವವರಿಗೆ ಕಾಲಲ್ಲಿ ಗೆಜ್ಜೆ, ಬಲಗೈಯಲ್ಲಿ ಒಂದು ಜೊತೆ ಚಕ್ಕೆಗಳಿದ್ದರೆ ಸಾಕು, ಇಪ್ಪತ್ತೈದರಿಂದ ಮೂವತ್ತು ಜನ ಕಲಾವಿದರಿದ್ದರು ಅವರನ್ನು ಕುಣಿಸಬಹುದು. ಜನಸಂಖ್ಯೆ ಹೆಚ್ಚಾದಷ್ಟು ಕುಣಿತವು ಅತ್ಯಂತ ಆಕರ್ಷಣೆಯಿಂದ ಕಾಣುತ್ತದೆ. ಕುಣಿತಕ್ಕೆ ಮೆರುಗು ತಂದುಕೊಡುವುದು ಸಂಗೀತವಾದುದರಿಂದ ಇಲ್ಲಿ ಹಾರ್ಮೋನಿಯಂ ಅಥವಾ ಕೀಬೋರ್ಡ್, ತಬಲ ಇಲ್ಲವೇ ನಾಸಿಕ್ ಡೋಲು ಇವುಗಳನ್ನು ಬಳಸಲಾಗುತ್ತದೆ. ಈ ಎಲ್ಲಾ ಪರಿಕರಗಳೊಂದಿಗೆ ಒಂದು ನೃತ್ಯ ಕಲಾತಂಡ ಗ್ರಾಮದ ಪ್ರಮುಖ ವಿಶಾಲ ವೃತ್ತದಲ್ಲಿ ಇಲ್ಲವೇ ಬಯಲಿನಲ್ಲಿ ಆಡಿ, ಪಾಡಿ, ಕುಣಿಯುವ ಸಂಕೀರ್ಣ

DOI: 10.59176
http://www.kristujayantijournal.com/index.php/KJKSP

ಕಲೆಯಾಗಿದೆ. ಈ ಮೂಲಕ ದೇವರ ಆರಾಧನೆ ಮತ್ತು ಅವನ ಮೇಲಿನ ಭಕ್ತಿಭಾವಗಳನ್ನು ಹೆಚ್ಚಿಸುವುದಷ್ಟೇ ಅಲ್ಲದೆ, ಶಾರೀರಿಕ ವ್ಯಾಯಾಮಕ್ಕೂ ಮಾನಸಿಕ ನೆಮ್ಮದಿಗೂ ಇದು ಸಹಾಯಕವಾಗಿದೆ.

**ಹಿನ್ನೆಲೆ :**

ಚಕ್ಕೆ ಭಜನೆಯು ಕರ್ನಾಟಕದ ನೆಲದಲ್ಲಿ ಹುಟ್ಟು ಕಂಡ ಕಲೆಯೇನು ಅಲ್ಲ. ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕದ ಗಡಿ ಭಾಗಗಳಲ್ಲಿ ಪಸರಿಸಿದ ಕಲೆಯಾಗಿದೆ. ಇದರ ಉಗಮ ವಿಕಾಸಗಳೆಲ್ಲವೂ ಆಂಧ್ರಪ್ರದೇಶದಲ್ಲಿಯೇ. ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಚಟೇಕಂಬ ಗ್ರಾಮ ವಾಸಿಯಾದ ಶ್ರೀ ಗುಂಡುರಾವ್ ರವರು ಚಕ್ಕೆ ಭಜನೆಯನ್ನು ಕಲಿಸುವ ಗುರುಗಳಾಗಿದ್ದು, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಕಲೆಯ ಉಗಮದ ಕುರಿತು ವಿಚಾರಿಸಿದಾಗ ಅವರು ಅದನ್ನು ಪೌರಾಣಿಕ ಹಿನ್ನೆಲೆಗೆ ಸಮೀಪಿಸಿದರು. ಗುಂಡುರಾವ್ ರವರು ಹೇಳುವಂತೆ "ಸೀತೆಯ ಅಪಹರಣ ನಂತರ, ಆಕೆಯನ್ನು ಹುಡುಕುತ್ತಾ ರಾಮ, ಲಕ್ಷ್ಮಣರು ದಕ್ಷಿಣದ ಕಡೆಗೆ ಪ್ರಯಾಣಿಸುತ್ತಾರೆ. ಈ ಸಂದರ್ಭದಲ್ಲಿ ಅವರು ಆಂಧ್ರ ಮತ್ತು ಕರ್ನಾಟಕದ ಗಡಿ ಭಾಗಗಳ ಮೇಲೆಯೇ ಹಾದು ಹೋದರಂತೆ. ಆಗ ಇಲ್ಲಿನ ಜನರು ಶ್ರೀರಾಮನಿಗೆ ಆಶ್ರಯ ನೀಡಿ, ಉಪಚರಿಸಿ, ಸತ್ಕರಿಸಿದರಂತೆ. ನಂತರ ಮುಂದಿನ ಪ್ರಯಾಣದ ದಿನಗಳಲ್ಲಿ ಶ್ರೀರಾಮನನ್ನು ಬೀಳ್ಕೊಡುವಾಗ ಜನರು ಅವನ ಜೀವನ, ಗುಣ ಸ್ವಭಾವ, ಮಹೋನ್ನತ ಸಾಧನೆಗಳು, ಆದರ್ಶ ಜೀವನ ಈ ಕುರಿತಂತೆ ಗುಣಗಾನ ಮಾಡುತ್ತಾ, ಶ್ರೀರಾಮನ ನಾಮಾವಳಿಗಳನ್ನು ಹಾಡಿದರಂತೆ. ಕಾಲಮಾನ ಉರುಳಿದಂತೆ ಅವನ ನಾಮಾವಳಿಗಳನ್ನು ಹಾಡುವ ಪರಿಪಾಠವು ಮುಂದುವರೆದು ಅದು ಚಕ್ಕೆ ಭಜನೆಯಾಗಿ ಈ ಕಲೆಯು ತನ್ನ ಹುಟ್ಟನ್ನು ಪಡೆದುಕೊಂಡಿದೆ ಎಂದು ಹೇಳುತ್ತಾರೆ."[2]

ಇವರು ಹೇಳುವ ಈ ಕಥೆಗೂ ಇಲ್ಲಿನ ಪ್ರದೇಶಗಳಲ್ಲಿ ಶ್ರೀರಾಮನಿಗೆ ಸಂಬಂಧಿಸಿದ ವಿಶೇಷ ಕ್ಷೇತ್ರಗಳು, ದೇವಾಲಯಗಳು ಇರುವುದು ಸಾಕ್ಷ್ಯಾಧಾರವಾಗಿದೆ. ಉದಾಹರಣೆಗೆ ಚಿತ್ರದುರ್ಗದಲ್ಲಿ ಜಟ್ಟಂಗಿ ರಾಮೇಶ್ವರ ದೇವಾಲಯದ ಹಿನ್ನೆಲೆಯನ್ನು ನೋಡಿದಾಗ, ಜಟಾಯು ಪಕ್ಷಿಯು ರಾವಣನೊಂದಿಗೆ ಹೋರಾಡಿ ಈ ಪ್ರದೇಶದಲ್ಲಿ ಸತ್ತು ಬಿದ್ದ ಚರಿತ್ರೆಯಿದೆ. ಕರ್ನಾಟಕದಲ್ಲಿ ಎಲ್ಲೂ ಕಂಡುಬರದ ಜಟ್ಟಂಗಿ ರಾಮೇಶ್ವರ ದೇವಸ್ಥಾನ ಸಿಗುವುದು ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ. ಇಂತಹ ಅನೇಕ ಪೌರಾಣಿಕ ಕುರುಹುಗಳು ಶ್ರೀರಾಮನು ಈ ಪ್ರದೇಶಗಳ ಮೂಲಕ ಹಾದು ಹೋದನೆಂಬ ಕಥೆಯನ್ನು ಸಮರ್ಥಿಸುತ್ತವೆ.

**ಚಕ್ಕೆ ಭಜನೆ ಕಲೆಯ ಶಿಕ್ಷಣ ಮತ್ತು ಗೆಜ್ಜೆಪೂಜೆ ಸಂಪ್ರದಾಯ :**

DOI: 10.59176
http://www.kristujayantijournal.com/index.php/KJKSP 

ಯಾವುದೇ ಮತಧರ್ಮಗಳ ಹಂಗಿಲ್ಲದೆ, ಜಾತಿ ಜನಾಂಗಿಕ ಹಿನ್ನೆಲೆಗಳಿಲ್ಲದೆ, ವಂಶಪಾರಂರ್ಯವಾಗಿ ಮಾಡಿಕೊಂಡು ಹೋಗಲೇಬೇಕೆಂಬ ಸಂಪ್ರದಾಯ ಎನ್ನುವಂತಹ ನಿಬಂಧನೆಗಳಿರದೆ, ಸ್ವತಂತ್ರವಾದ ಮತ್ತು ಎಲ್ಲಾ ಜನರು ಪಾಲ್ಗೊಳ್ಳಬಹುದಾದ ಒಂದು ಸಮೂಹ ನೃತ್ಯ ಇದಾಗಿದೆ. ಇದನ್ನು ಕಲಿಸಿ ಕೊಡಲು ಒಬ್ಬ ಗುರು ಇರುತ್ತಾನೆ. ಸಾಮಾನ್ಯವಾಗಿ ಸುಗ್ಗಿ ಮುಗಿಸಿಕೊಂಡ ನಂತರದ ಬಿಡುವಿನ ವೇಳೆಯಲ್ಲಿ, ಈ ಗುರುವಿನ ಬಳಿಯಲ್ಲಿ ಆಸಕ್ತ ಯುವಕ, ಯುವತಿಯರು, ಮಕ್ಕಳುಗಳು ಚಕ್ಕೆ ಭಜನೆಯನ್ನು ಕಲಿಯಲು ಬರುತ್ತಾರೆ. ಇವರುಗಳಿಗೆ ಪ್ರತಿನಿತ್ಯ ರಾತ್ರಿ ಏಳು ಗಂಟೆಯಿಂದ ಒಂಭತ್ತು ಗಂಟೆಯವರೆಗೆ ಕಲಾ ತರಬೇತಿಯನ್ನು ನೀಡಲಾಗುತ್ತದೆ. ಹೀಗೆ ಸುಮಾರು ಒಂದೆರೆಡು ತಿಂಗಳುಗಳಲ್ಲಿ ತರಬೇತಿ ಪೂರ್ಣಗೊಳಿಸುವ ಕಲಾವಿದರು ಚಕ್ಕೆ ಭಜನೆಯ ಹಾಡುಗಳು, ಬಗೆ ಬಗೆಯ ಕುಣಿತದ ಹೆಜ್ಜೆಗಳು ಎಲ್ಲವನ್ನೂ ಕರಗತ ಮಾಡಿಕೊಳ್ಳುತ್ತಾರೆ. ಶಿಕ್ಷಣ ಪಡೆದ ನಂತರ ಇವರು ಕಲಿತ ಕುಣಿತದ ಪ್ರದರ್ಶನ ಮತ್ತು ಕಲೆಯನ್ನು ಕಲಿಸಿದ ಗುರುವಿನಿಂದ ಆಶೀರ್ವಾದ ಪಡೆಯುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಇದಕ್ಕೆ ಗೆಜ್ಜೆಪೂಜೆ ಎಂದು ಕರೆಯುತ್ತಾರೆ.

ಗೆಜ್ಜೆಪೂಜೆಯೆಂಬುದು ಬಹು ಮುಖ್ಯವಾಗಿ ತಾವುಗಳು ಕಲಿತ ಕಲೆಯ ನೃತ್ಯ ಪ್ರದರ್ಶನವೇ ಆಗಿರುತ್ತದೆ. ನಿಗಧಿಪಡಿಸಿದ ದಿನದಂದು ಊರಿನ ಮುಖ್ಯ ಬೀದಿಯಲ್ಲಿ, ವೃತ್ತಾಕಾರವಾಗಿ ನಿಂತು ಕುಣಿಯಲು ಅನುಕೂಲವಾಗುವ ಜಾಗವನ್ನು ಆಯ್ದು, ಅದರ ಮಧ್ಯಭಾಗದಲ್ಲಿ ಎತ್ತರವಾದ ಕಂಬವನ್ನು ನೆಟ್ಟು ತಳಿರು ತೋರಣಗಳಿಂದ ಮತ್ತು ವಿದ್ಯುತ್ ದೀಪಗಳಿಂದ ಆ ಸ್ಥಳವನ್ನು ಅಲಂಕರಿಸಲಾಗಿರುತ್ತದೆ. "ಗೆಜ್ಜೆಪೂಜೆ ನಡೆಯುವುದು ರಾತ್ರಿ ಏಳು ಗಂಟೆಯ ಸುಮಾರಿಗೆ, ಆಗ ದೀಪಗಂಬದ ಬಳಿ ಚಿಕ್ಕದಾದ ಖುರ್ಚಿಯನ್ನು ಇರಿಸಿ, ಅದರ ಮೇಲೆ ಶ್ರೀ ರಾಮನ ಫೋಟೋ ಇಟ್ಟು, ದೀಪ ಹಚ್ಚಿ ಶ್ರದ್ಧಾಭಕ್ತಿಗಳಿಂದ ಚಕ್ಕೆ ಭಜನೆಯ ಮೇಸ್ತ್ರು ಮತ್ತು ಅದನ್ನು ಕಲಿತುಕೊಂಡಿರುವ ಕಲಾವಿದರು ಪೂಜಿಸುತ್ತಾರೆ. ಕುಣಿತದ ಪರಿಕರಗಳಾದ ಚಕ್ಕೆಗಳಿಗೆ, ಗೆಜ್ಜೆಗಳಿಗೆ, ವಾದ್ಯಗಳಿಗೆ ಗುರುವು ಪೂಜೆಯನ್ನು ಸಲ್ಲಿಸಿ ತಮ್ಮ ಕೈಯಾರ ಗೆಜ್ಜೆಗಳನ್ನು ಕಲಾವಿದರಿಗೆ ಕಟ್ಟುತ್ತಾರೆ ಹಾಗೆಯೇ ತಲಾ ಒಂದೊಂದು ಜೊತೆ ಚಕ್ಕೆಗಳನ್ನು ನೀಡುತ್ತಾರೆ. ಇದನ್ನು ಪಡೆಯುವ ಪ್ರತಿಯೊಬ್ಬ ಕಲಾವಿದರು, ಗುರುಗಳಿಗೆ ಅಡ್ಡಬಿದ್ದು ನಮಸ್ಕರಿಸಿ ಆಶೀರ್ವಾದವನ್ನು ಪಡೆದು, ನಿಗದಿತ ಸ್ಥಳದಲ್ಲಿ ವೃತ್ತಾಕಾರವಾಗಿ ಬಂದು ನಿಲ್ಲುತ್ತಾರೆ. ಕುಣಿಯಲು ಸಿದ್ಧರಾಗಿರುವ ಕಲಾವಿದರೆಲ್ಲರೂ ಗುರುಗಳ ಜೊತೆಗೂಡಿ ಗಣೇಶ ಸ್ತುತಿಯನ್ನು ಹಾಡಿ, ತಮ್ಮ ಚಕ್ಕೆ ಭಜನೆ ಕುಣಿತವನ್ನು ಗುರುಗಳ ಆಜ್ಞೆಯಂತೆ ಆರಂಭಿಸುತ್ತಾರೆ. ಇದೊಂದು ಪ್ರಾಯೋಗಿಕ ನೃತ್ಯ ಪ್ರದರ್ಶನವಾದುದರಿಂದ ಕೇವಲ ಎರಡು ಅಥವಾ ಮೂರು ಗಂಟೆಗಳು ಮಾತ್ರ ಪ್ರದರ್ಶನ ನೀಡಿ, ಕೊನೆಗೆ ಮಂಗಳಾರತಿ ಹಾಡಿ ನೃತ್ಯವನ್ನು ಮುಗಿಸಿ ಬಿಡುತ್ತಾರೆ."[3] ಈ ರೀತಿಯಾಗಿ ನಡೆಸುವ ಕಾರ್ಯಕ್ರಮವನ್ನು ಗೆಜ್ಜೆಪೂಜೆ ಎಂದು ಕರೆಯಲಾಗುತ್ತದೆ.

**ಚಕ್ಕೆ ಭಜನೆಯ ಸಾಧನಗಳು, ವಾದ್ಯಗಳು ಮತ್ತು ವೇಷಭೂಷಣ :**

ಚಕ್ಕೆ ಭಜನೆ ನೃತ್ಯಕ್ಕೆ ಕೈಯಲ್ಲಿ ಹಿಡಿದುಕೊಳ್ಳಲು ಒಂದು ಜೊತೆ **ಚಕ್ಕೆಗಳು** ಮತ್ತು ಕಾಲಿಗೆ ಕಟ್ಟಿಕೊಳ್ಳುವ **ಗೆಜ್ಜೆಯು** ಬಹುಮುಖ್ಯವಾದ ಸಾಧನಗಳಾಗಿವೆ. ಇದರ ಜೊತೆಗೆ ಸಂಗೀತ ಮೇಳಕ್ಕಾಗಿ ಟ್ಯಾಶೋ(ಕೀ ಬೋರ್ಡ್), ನಾಸಿಕ್ ಡೋಲು

DOI: 10.59176

ಬಳಸುತ್ತಾರೆ. ಪ್ರದರ್ಶನವು ಬೀದಿಯಲ್ಲಿ ನಡೆಯುವುದರಿಂದ ಇವರು ಹೇಳುವ ಹಾಡುಗಳು ಮತ್ತು ಸಂಗೀತವು ದೂರದಲ್ಲಿ ನಿಂತಿರುವ ಜನರನ್ನು ತಲುಪುವಂತೆ ಮೈಕ್‌ಸೆಟ್, ಸೌಂಡ್‌ಬಾಕ್ಸ್‌ಗಳನ್ನು ಬಳಸುತ್ತಾರೆ. "ಭಜನೆಗೆ ಉಪಯೋಗಿಸುವ ಚಕ್ಕೆಗಳು ಒಂದು ಅಡಿಯಿಂದ ಒಂದುವರೆ ಅಡಿಯಷ್ಟು ಉದ್ದವಿದ್ದು, ಎರಡು ಇಂಚು ದಪ್ಪವಿರುತ್ತದೆ. ಈ ಚಕ್ಕೆಗಳ ತುದಿಭಾಗದಲ್ಲಿ ಚಕ್ಕೆಯ ಮಧ್ಯಕ್ಕೆ ರಂಧ್ರ ಕೊರೆದು ಬಿಲ್ಲೆಯಾಕಾರದ ಕಬ್ಬಿಣ ಅಥವಾ ತಾಮ್ರದ ತಗಡುಗಳನ್ನು ಸೇರಿಸಿರಲಾಗಿರುತ್ತದೆ."[4] ಈ ಬಗೆಯಾದದ ಒಂದು ಜೊತೆ ಚಕ್ಕೆಗಳನ್ನು ಬಲಗೈಯಲ್ಲಿ ಹಿಡಿದು ಹಾಡು, ಸಂಗೀತ ಮೇಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಕುಣಿಯುವಾಗ ಒಂದಕ್ಕೊಂದು ಚಕ್ಕೆಗಳು ತಗುಲಿ, ತಾಳಕ್ಕೆ ತಕ್ಕಂತೆ ಝಲ್ ಝಲ್ಲೆಂದು ಶಬ್ಧನ್ನುಂಟುಮಾಡಿ ಕೇಳಲು ಇಂಪಾದ ಶಬ್ಧವನ್ನು ಹೊರಡಿಸುತ್ತದೆ. ಇನ್ನು ಕಾಲಿಗೆ ಕಟ್ಟಿಕೊಳ್ಳುವ ಗೆಜ್ಜೆಯು ಸಹಜವಾಗಿ ಭರತನಾಟ್ಯ, ಕೋಲಾಟ ಇತ್ಯಾದಿ ನೃತ್ಯಗಳಲ್ಲಿ ಬಳಸುವ ಮಾದರಿಯಲ್ಲಿಯೇ ಇರುತ್ತದೆ. ಕುಣಿಯುವ ಎಲ್ಲರಿಗೂ ಈ ಗೆಜ್ಜೆಗಳನ್ನು ನೀಡಿರಲಾಗಿರುತ್ತದೆ. ಇದರ ಜೊತೆಗೆ ವಿವಿಧ ರಾಗ ಸ್ವರಗಳನ್ನು ಹೊರಡಿಸುವ ಆಧುನಿಕ ವಿದ್ಯುತ್‌ಚಾಲಿತ ಕೀಬೋರ್ಡ್ ಅನ್ನು ಮತ್ತು ನಾಸಿಕ್ ಡೋಲಕ್ ಅನ್ನು ಬಳಸುವುದರಿಂದ ಇವರ ಚಕ್ಕೆ ಭಜನೆಯ ಹಾಡುಗಳ ಸಾಹಿತ್ಯಕ್ಕೆ ತಕ್ಕುದಾದ ಸಂಗೀತ ಸಂಯೋಜನೆಯನ್ನು ಮಾಡಿ ಕುಣಿಯುವ ಕಲಾವಿದರಿಗೆ ಮತ್ತಷ್ಟು ಹುಮ್ಮಸ್ಸನ್ನು ಹೆಚ್ಚಿಸುತ್ತದೆ.

ಚಕ್ಕೆ ಭಜನೆಯನ್ನು ಮಾಡುವ ಕಲಾವಿದರಿಗೆ ವಿಶೇಷವಾದ ಉಡುಪಗಳೇನೂ ಅಗತ್ಯವಿರುವುದಿಲ್ಲ. ಆದರೆ ಪ್ರೇಕ್ಷಕರ ಆಕರ್ಷಣೆಗೆಂದು ಸರಳವಾದ ಸಮವಸ್ತ್ರಗಳನ್ನು ಇಲ್ಲಿ ಧರಿಸುತ್ತಾರೆ. ಪುರುಷರು ಕಚ್ಚೆಪಂಚೆ, ತೋಳು ಇರುವ ಬನಿಯನ್ ಇಲ್ಲವೇ ಬಿಳಿಯ ಅಂಗಿ ತೊಟ್ಟಿರುತ್ತಾರೆ. ಮಹಿಳೆಯರಿಗೆ ಭರತನಾಟ್ಯದಲ್ಲಿ ಬಳಸುವಂತೆ ನೆರಿಗೆಗಳಿಂದ ಸಿದ್ಧವಿರುವ ಸೀರೆ, ಚಿಕ್ಕ ವಯಸ್ಸಿನ ಹುಡುಗಿಯರಿಗೆ ಫ್ರಾಕ್ ಅನ್ನು ಬಳಸುತ್ತಾರೆ. ಇದಲ್ಲದೆ ಪುರುಷರು ಹಣೆಪಟ್ಟಿ, ತೋಳುಬಂದಿ, ಸೊಂಟಕ್ಕೆ ವೇಲು ಈ ರೀತಿಯಾಗಿ ವಿವಿಧ ಬಣ್ಣದ ಬಟ್ಟೆಯ ಟೇಪುಗಳನ್ನು ಬಳಸುತ್ತಾರೆ.

**ಚಕ್ಕೆ ಭಜನೆಯ ಪ್ರದರ್ಶನ :**

ಚಕ್ಕೆ ಭಜನೆಯು ಹಾಡು, ಕುಣಿತ ಮತ್ತು ವಾದ್ಯಮೇಳ ಈ ಮೂರು ಅಂಶಗಳಿಂದ ಕೂಡಿರುವ ಸಂಕೀರ್ಣ ಕಲೆಯೆಂದು ಹೇಳಬಹುದು. ಇದಕ್ಕೆ ಯಾವುದೇ ರೀತಿಯ ರಂಗ ಸಜ್ಜಿಕೆ, ವೇದಿಕೆಗಳ ಅವಶ್ಯಕತೆಯಿರುವುದಿಲ್ಲ. ಸಹಜವಾಗಿ ಊರುಗಳ ನಡುವೆ ಇರುವ ವಿಶಾಲವಾದ ಬಯಲಿನ ವೃತ್ತ ಸಿಕ್ಕರೆ ಸಾಕು. ಅಲ್ಲಿ ಕಲಾವಿದರನ್ನು ನಿಲ್ಲಿಸಿ ನೃತ್ಯವನ್ನು ಮಾಡಿಸಬಹುದು. ಸಾಮಾನ್ಯವಾಗಿ ಈ ಭಾಗದ ಹಳ್ಳಿಗರು ಸುಗ್ಗಿ ಕೆಲಸವನ್ನೆಲ್ಲಾ ಮುಗಿಸಿಕೊಂಡು ಬಿಡುವಾದ ಸಮಯದಲ್ಲಿ ತಮ್ಮ ಮನೋರಂಜನೆಗಾಗಿ ಚಕ್ಕೆ ಭಜನೆಕಾರರನ್ನು ತಮ್ಮ ಊರಿಗೆ ಆಹ್ವಾನಿಸಿ ನೃತ್ಯವನ್ನು ನಡೆಸಲು ಅನುವು ಮಾಡಿಕೊಡುತ್ತಾರೆ.

ಊರಿನ ಮುಖ್ಯ ಬೀದಿಯಲ್ಲಿ ದೀಪಗಂಬವನ್ನು ನೆಟ್ಟು, ಅದರ ಸುತ್ತಲಿನ ಪ್ರದೇಶವನ್ನು ಅಲಂಕರಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ. ಕುಣಿತ ಆರಂಭವಾಗುವ ಮುನ್ನ ಶ್ರೀ ರಾಮನ ಭಾವಚಿತ್ರಕ್ಕೆ ವಿಧಿಯಂತೆ ತೆಂಗಿನ ಕಾಯಿ ಹೊಡೆದು,

ಊದುಬತ್ತಿ ಹಚ್ಚಿ, ದೀಪ ಬೆಳಗಿ ಪೂಜೆ ಸಲ್ಲಿಸಲಾಗುತ್ತದೆ. ಜೊತೆಗೆ ಈ ನೃತ್ಯದಲ್ಲಿ ಬಳಸುವ ಚಕ್ಕೆಗಳಿಗೂ, ವಾದ್ಯವಾಧನಗಳಿಗೂ ಪೂಜೆ ಸಲ್ಲಿಸುತ್ತಾರೆ. ಪೂಜೆಯಾದ ಬಳಿಕ ಕಲಾವಿದರೆಲ್ಲರೂ ಗುರುವಿಗೆ ಅಡ್ಡಬಿದ್ದು ನಮಸ್ಕರಿಸಿ, ಗುರು ಮುಖೇನ ಚಕ್ಕೆಗಳನ್ನು ಪಡೆದು ತಮ್ಮ ಜಾಗದಲ್ಲಿ ನಿಲ್ಲುತ್ತಾರೆ. ಕುಣಿಯುವ ಕಲಾವಿದರು ಒಟ್ಟು ಇಪತ್ತೈದರಿಂದ ಮೂವತ್ತು ಜೋಡಿ ಪುರುಷ ಮತ್ತು ಮಹಿಳೆಯರು, ಭಜನಾ ಸಾಹಿತ್ಯವನ್ನು ಹಾಡುವ ನಾಲ್ಕು ಜನ ಹಾಡುಗಾರರು, ವಾದ್ಯ ನುಡಿಸುವ ನಾಲ್ಕು ಜನ ವಾದ್ಯವಾಧಕರು ಹಾಗೂ ಗುರುಗಳು ಎಲ್ಲರೂ ಸೇರಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ಗಣೇಶನ ಸ್ತುತಿಯನ್ನು ಹಾಡಿ ಚಕ್ಕೆ ಭಜನೆಗೆ ಚಾಲನೆಯನ್ನು ನೀಡುತ್ತಾರೆ. ಗುರುವು ವಿಜ್ಹಿಲ್ ಹಾಕುವುದರ ಮೂಲಕ ನೃತ್ಯ ಆರಂಭಕ್ಕೆ ಸೂಚನನೆಯನ್ನು ನೀಡುತ್ತಾರೆ. ತಕ್ಷಣವೇ ವಾದ್ಯದವರು ಧ್ವನಿಮಾಡಿ ನುಡಿಸಿದಂತೆ ಮುಮ್ಮೇಳದವರು ಆಲಾಪ ತೆಗೆದು, ಮೊಟ್ಟ ಮೊದಲನೆಯದಾಗಿ "ಶ್ರೀ ರಾಮನ ಕುರಿತಂತೆ ಅವನ ಬಾಲ್ಯ ಜೀವನ, ಬೆಳವಣಿಗೆ, ವಿವಾಹ, ಸಾಧನೆ, ಶೌರ್ಯ–ಸಾಹಸಗಳ ಕುರಿತು ಬಗೆಬಗೆಯ ಹಾಡುಗಳನ್ನು ಹಾಡುತ್ತಾರೆ. ಒಂದೊಂದು ಹಾಡಿಗೂ ಒಂದೊಂದು ಬಗೆಯ ಚಲನವಲನವನ್ನು ನೃತ್ಯದ ಧಾಟಿಗಳನ್ನು ಬದಲಾಯಿಸುತ್ತಾ ಕುಣಿಯುವವರು ಸಾಗುತ್ತಾರೆ. ಶ್ರೀ ರಾಮನ ಕುರಿತಾದ ಭಜನೆಯ ನಂತರ ಸತ್ಯಹರಿಶ್ಚಂದ್ರನ ಕಥೆಯನ್ನು ಸಾರುವ ಹಾಡುಗಳನ್ನು ಹಾಡುತ್ತಾರೆ. ಆ ನಂತರ ಮಹಾಭಾರತದ ಕೆಲವು ಪ್ರಸಂಗಗಳ ಹಾಡುಗಳನ್ನು, ತದನಂತರ ವೀರಬ್ರಹ್ಮೇಂದ್ರ ಸ್ವಾಮಿಗಳ ಪವಾಡಗಳನ್ನು ಕುರಿತಂತೆ ಹಾಡುತ್ತಾರೆ. ಮಧ್ಯ ಮಧ್ಯದಲ್ಲಿ ಕೆಲವು ಸಿನಿಮಾ ಗೀತೆಗಳನ್ನು ಸಹ ಕುಣಿತಕ್ಕೆ ಬಳಸಿಕೊಳ್ಳುತ್ತಾರೆ. ಕೊನೆಯದಾಗಿ ಮಹಾಮಂಗಳಾರತಿ ಹಾಡಿ ತಮ್ಮ ನೃತ್ಯವನ್ನು ಮುಗಿಸುತ್ತಾರೆ."[5] ಹೀಗೆ ರಾತ್ರಿ ಎಂಟು ಗಂಟೆ ಇಲ್ಲವೆ ಒಂಭತ್ತು ಗಂಟೆಗೆ ಚಕ್ಕೆ ಭಜನೆ ಕುಣಿತವು ಆರಂಭವಾದರೆ ರಾತ್ರಿ ಇಡೀ ಇದು ನಡೆದು ಬೆಳಗಿನ ಜಾವ ಆರು ಗಂಟೆಗೆ ಮುಕ್ತಾಯಗೊಳ್ಳುತ್ತದೆ.

ಕೋಲಾಟದ ಕುಣಿತದ ಭಂಗಿಗಳಂತೆ ಇದರಲ್ಲಿಯೂ ಕುಳಿತು ನಿಂತು ಕುಣಿಯುವುದು, ವೃತ್ತಾಕಾರವಾಗಿ ಕುಣಿಯುವಾಗ ಸರಿಯಾದ ಕ್ರಮದಲ್ಲಿ ಆಯ್ದ ಕುಣಿತಗಾರರು ಮಾತ್ರ ಒಳಗೆ ಹೊರಗೆ ಹೋಗಿ ಬರುವುದು, ಸುತ್ತು ಹಾಕುತ್ತಾ ತಮ್ಮ ಸ್ಥಾನಗಳನ್ನು ಬದಲಾಯಿಸುತ್ತಾ ಪುನಃ ಮೂಲಸ್ಥಾನಕ್ಕೆ ಬರುವುದು, ವಿಶೇಷವಾಗಿ ಮಹಿಳೆಯರು ಕುಂಭದ ಮೇಲೆ ನಿಂತು ಕುಣಿಯುವುದು. ಹೀಗೆ ಬಗೆ ಬಗೆಯಾದ ಹೆಜ್ಜೆಗಳನ್ನು ಅಲ್ಲಿನ ರಾಗಕ್ಕೆ, ಸಾಹಿತ್ಯಕ್ಕೆ, ಸಂಗೀತಕ್ಕೆ ತಕ್ಕಂತೆ ಬದಲಾಯಿಸುತ್ತಾ ಹೋಗುತ್ತಾರೆ. ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಯ ಕುಣಿತಕ್ಕೆ ತೆರಳುವಾಗ ಗುರುವು ವಿಜ್ಹಿಲ್ ಸಂಜ್ಞೆಯ ಮೂಲಕ ಹೆಜ್ಜೆ ಬದಲಾಯಿಸುವಂತೆ ಸೂಚಿಸುತ್ತಾರೆ ಮತ್ತು ಹೆಜ್ಜೆಯ ಹೆಸರನ್ನೂ ಸಹ ಕೂಗಿ ಹೇಳುತ್ತಾರೆ. ಒಂದು ಹೆಜ್ಜೆಯ ವರಸೆಯು ಕನಿಷ್ಠ ಐದರಿಂದ ಹತ್ತು ನಿಮಿಷದ ಅವಧಿಯವರೆಗಾದರೂ ಇರುತ್ತದೆ. "ಚಕ್ಕೆ ಭಜನೆಗಳಲ್ಲಿರುವ ಹೆಜ್ಜೆಗಳಲ್ಲಿ ಮುಖ್ಯವಾಗಿ ಆದಿ ಹೆಜ್ಜೆ, ಎರೆಡು ಹೆಜ್ಜೆ, ಮೂರು ಹೆಜ್ಜೆ, ನಾಲ್ಕು ಹೆಜ್ಜೆ, ಐದು ಹೆಜ್ಜೆ, ಆರು ಹೆಜ್ಜೆ, ಏಳು ಹೆಜ್ಜೆ, ಎಂಟು ಹೆಜ್ಜೆ, ಒಂಭತ್ತು ಹೆಜ್ಜೆ, ಹತ್ತು ಹೆಜ್ಜೆ, ಎರಡು ಹೊಡೆತ, ಕಪ್ಪಡುಗು, ಹಾಸ್ಯ ಹೆಜ್ಜೆ, ರೆಂಡು ಮೆಲಿಕ, ರೆಂಡು ಕುಪ್ಪ, ಬೈಸಿಕಲ್ ಅಡುಗು, ಗುರ್ರಪು, ವಂಟಿಭೇರಿ, ಪದ್ಮವ್ಯೂಹಂ, ವಾಲಾಮು"[6] ಮೊದಲಾದ ಶೈಲಿಯ ಹೆಜ್ಜೆಗಳು ಇಡೀ ರಾತ್ರಿಯ ಕುಣಿತದಲ್ಲಿ ಬಂದು ಹೋಗುತ್ತವೆ. ಈ ಚಕ್ಕೆ ಭಜನೆಯಲ್ಲಿ ಬಹಳ ವಿಶಿಷ್ಟವಾದುದು, ಅತ್ಯಂತ ಆಕರ್ಷಣೀಯವಾದುದು

ಎಂದರೆ ಪದ್ಮವ್ಯೂಹಂ ಹೆಜ್ಜೆಯಲ್ಲಿ ಕುಣಿಯುವುದು. ಕುಂಭದ ಮೇಲೇರಿ ಕುಣಿಯುವುದು ಮತ್ತು ಕುಲುಕು ಹೆಜ್ಜೆಯಲ್ಲಿ ಕಲಾವಿದ ತನ್ನ ಶರೀರವನ್ನು ವಿವಿಧ ರೀತಿಯಲ್ಲಿ ಕುಲುಕಿಸಿ ವಿಶೇಷವೆನಿಸುವ ವಿನೋದವನ್ನುಂಟು ಮಾಡುತ್ತಾನೆ. ಈ ರೀತಿಯಾಗಿ ಬಗೆ ಬಗೆಯ ಹೆಜ್ಜೆ, ವೇಗವಾಗಿ ಸಾಗುವ ಹೆಜ್ಜೆ ಮೊದಲಾದವುಗಳೆಲ್ಲ ಮುಗಿದ ನಂತರ ಕೊನೆಯಲ್ಲಿ ಮಹಾಮಂಗಳಾರತಿ ಗೀತೆಯನ್ನು ಹಾಡುತ್ತಾರೆ. ಈ ಮಂಗಳಾರತಿಯನ್ನು ತೆಗೆದುಕೊಂಡು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಇಂತಹ ಅದ್ಭುತವಾದ ಚಕ್ಕೆ ಭಜನೆಯ ಕಾರ್ಯಕ್ರಮವನ್ನು ಚಳ್ಳಕೆರೆಯ ಭಾಗದಲ್ಲಿ ಯುಗಾದಿ, ದೀಪಾವಳಿ, ರಾಮನವಮಿ ಹಬ್ಬಗಳಲ್ಲಿ ಗಣೇಶ ಚತುರ್ಥಿಯ ಮಾಸದಲ್ಲಿ, ವಿವಿಧ ಜಾತ್ರೋತ್ಸವಗಳ ಸಂದರ್ಭಗಳಲ್ಲಿ ಏರ್ಪಡಿಸುತ್ತಾರೆ.

ಚಕ್ಕೆ ಭಜನೆಯು ಮೂಲತಃ ಆಂಧ್ರ ಪ್ರದೇಶದ ಕಲೆಯಾಗಿದ್ದರೂ ಕರ್ನಾಟಕದ ಗಡಿಯಂಚಿನ ಕೆಲವೇ ಕೆಲವು ಬೆರಳೆಣಿಕೆಯಷ್ಟು ಪ್ರದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ. ಆಕರ್ಷಣೀಯವಾದ ಕುಣಿತ, ಕುಣಿತಕ್ಕೆ ತಕ್ಕುದಾದ ಗೀತೆಗಳು, ಈ ಕಾರ್ಯಕ್ರಮ ನಡೆಸುವುದಕ್ಕಾಗಿ ಇಡೀ ಊರನ್ನೇ ಶೃಂಗರಿಸುವ ರೀತಿ, ಕುಣಿಯುವ ಸ್ಥಳದಲ್ಲಿ ವಿಜೃಂಭಿಸುವ ದೀಪದಲಂಕಾರ ಇವೆಲ್ಲವೂ ಜನರನ್ನು ತನ್ನತ್ತ ಸೆಳೆದು ಹೆಚ್ಚಿನ ಪ್ರೇಕ್ಷಕರನ್ನು ಬರಮಾಡಿಕೊಳ್ಳುತ್ತದೆ. ಆಂಧ್ರದಲ್ಲಿ ಇದು ತುಂಬಾ ಪ್ರಚಲಿತದಲ್ಲಿರುವ ನೃತ್ಯ ಮೇಳ. ಈಗೀಗ ಕರ್ನಾಟಕದ ಗಡಿಯಲ್ಲಿಯೂ ಸಹ ತನ್ನ ಪ್ರಭಾವನ್ನು ಹೆಚ್ಚಿಸಿಕೊಳ್ಳುತ್ತಿದೆ. ದೈವಾರಾಧನೆಯ ಕಲೆಗಳ ಪ್ರಭೇದಗಳಲ್ಲಿ ಚಕ್ಕೆ ಭಜನೆಯು ಒಂದಾಗಿದ್ದು ಹೆಚ್ಚಾಗಿ ಶ್ರೀ ರಾಮನ ನೆನೆದು ಆತನನ್ನು ಭಜಿಸುವುದೇ ಈ ಕಲೆಯ ಮುಖ್ಯ ಧ್ಯೇಯ. ಇದು ಈ ಭಜನೆಯಲ್ಲಿ ಹಾಡಲ್ಪಡುವ ಶ್ರೀ ರಾಮನ ಕಥಾವಳಿಗಳಿಂದಲೇ ತಿಳಿದು ಬರುತ್ತದೆ. ಅದಕ್ಕಾಗಿಯೇ ಇದನ್ನು 'ಶ್ರೀ ರಾಮ ಚಕ್ಕೆ ಭಜನೆ' ಎನ್ನುವ ಇನ್ನೊಂದು ಹೆಸರಿನಿಂದ ಕರೆಯುವುದು.

**ಕೊನೆ ಟಿಪ್ಪಣಿಗಳು**

1. ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ–1 – (ಪ್ರ.ಸಂ) ಡಾ. ಎ. ಮುರಿಗೆಪ್ಪ, (ಸಂ) ಡಾ. ಸ. ಚಿ. ರಮೇಶ, ಪು.ಸಂ–348,
2. ಶ್ರೀ ಗುಂಡುರಾವ್, ಚಟೇಕಂಬ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ – ಚಕ್ಕೆ ಭಜನೆ ಮೇಸ್ಟ್ರು ಮತ್ತು ಕಲಾವಿದರು, ಇವರ ಸಂದರ್ಶನದ ಆಯ್ದ ಭಾಗ.
3. ಶ್ರೀ ಗುಂಡುರಾವ್, ಚಟೇಕಂಬ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ – ಚಕ್ಕೆ ಭಜನೆ ಮೇಸ್ಟ್ರು ಮತ್ತು ಕಲಾವಿದರು, ಇವರ ಸಂದರ್ಶನದ ಆಯ್ದ ಭಾಗ.
4. ಶ್ರೀ ಗುಂಡುರಾವ್, ಚಟೇಕಂಬ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ – ಚಕ್ಕೆ ಭಜನೆ ಮೇಸ್ಟ್ರು ಮತ್ತು ಕಲಾವಿದರು, ಇವರ ಸಂದರ್ಶನದ ಆಯ್ದ ಭಾಗ.

5. ಶ್ರೀ ಗುಂಡುರಾವ್, ಚಟೇಕಂಬ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ – ಚಕ್ಕೆ ಭಜನೆ ಮೇಸ್ತ್ರು ಮತ್ತು ಕಲಾವಿದರು, ಇವರ ಸಂದರ್ಶನದ ಆಯ್ದ ಭಾಗ.
6. ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ–1 – (ಪ್ರ.ಸಂ) ಡಾ. ಎ. ಮುರಿಗೆಪ್ಪ, (ಸಂ) ಡಾ. ಸ. ಚಿ. ರಮೇಶ, ಪು.ಸಂ–348,

**ಗ್ರಂಥಋಣ :**


1. ಕನ್ನಡ ವಿಷಯ ವಿಶ್ವಕೋಶ, ಜಾನಪದ – (ಪ್ರ.ಸಂ) ಡಾ. ಅರವಿಂದ ಮಾಲಗತ್ತಿ, (ಸಂ) ಡಾ. ಡಿ. ಕೆ. ರಾಜೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2006.
2. ಕರ್ನಾಟಕ ಸಂಶೋಧನಾ ಜಾನಪದ – (ಪ್ರ.ಸಂ) ಪ್ರೊ. ಅಂಬಳಿಕೆ ಹಿರಿಯಣ್ಣ, (ಸಂ) ಪ್ರೊ. ಎಂ. ವಿ. ನಾವಡ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, 2014.
3. ಕರ್ನಾಟಕ ಜನಪದ ಕಲೆಗಳ ಕೋಶ – (ಸಂ) ಡಾ. ಹಿ. ಚಿ ಬೋರಲಿಂಗಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2015.
4. ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ–1 – (ಪ್ರ.ಸಂ) ಡಾ. ಎ. ಮುರಿಗೆಪ್ಪ, (ಸಂ) ಡಾ. ಸ. ಚಿ. ರಮೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2022.
5. ದೇಸಿ ಕನ್ನಡ ಪರಂಪರೆ. – ಡಾ. ಹಿ. ಚಿ. ಬೋರಲಿಂಗಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2016.